ಸಾಕ್ಷಿಯನ್ನು ದಿಃ **08.07.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ ಸಿ.ಆರ್. ವಕೀಲರಿಂದಃ-**

ಚನ್ನಮ್ಮ ಮತ್ತು ಕಾಳಯ್ಯರವರು 2 ಮತ್ತು 3ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಸ್ವತ್ತಿನಲ್ಲಿ ತಮ್ಮ ಸಹೋದರರಿಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದು 5ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದ ಕಂಡಿಕೆ 13ರಲ್ಲಿ ಹೇಳಿದ್ದಾರೆ ಎಂದರೆ ಯಾವುದೇ ಮಾರಾಟ ಮಾಡಿಲ್ಲ. 5ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದ 13ನೇ ಪ್ಯಾರಾದ 6ನೇ ಸಾಲಿನಲ್ಲಿ ದಾವಾ ಆಸ್ತಿಯನ್ನು ವಾದಿಗಳ ಮತ್ತು 4, 5ನೇ ಪ್ರತಿವಾದಿಗಳ ತಾಯಿ ಚನ್ನಮ್ಮ ಮತ್ತು 1ನೇ ಪ್ರತಿವಾದಿಯು 2 ಮತ್ತು 3ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಮೇಲೆ ದಾವಾ ಆಸ್ತಿಯಲ್ಲಿ ವಾದಿಗಳಿಗಾಗಲೀ, 4 ಮತ್ತು 5ನೇ ಪ್ರತಿವಾದಿಗಳಿಗಾಗಲೀ ಯಾವತ್ತೂ ಕೂಡ ಸ್ವಾಧೀನ ಇಲ್ಲ ಎಂದು ಬರೆಸಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ಮಾರಾಟ ಮಾಡಿಲ್ಲ. 5ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದ 12ನೇ ಪ್ಯಾರಾದಲ್ಲಿ ಶ್ರೀಮತಿ ಚನ್ನಮ್ಮ ಕೊಂ ಲೇಟ್ ಹಲಗಯ್ಯ ಮತ್ತು ಶ್ರೀ ಕಾಳಯ್ಯ ಅಃ ಕೆಂಪರಸಯ್ಯರವರು ಅಭಿವೃದ್ಧಿಪಡಿಸದ ದಾವಾ ಷೆಡ್ಯೂಲ್ ಸ್ವತ್ತನ್ನು 2 ಮತ್ತು 3ನೇ ಪ್ರತಿವಾದಿಗಳಿಗೆ ರೂ.1,38,750/-ಕ್ಕೆ ಮಾರಾಟ ಮಾಡಿರುತ್ತಾರೆ, 2 ಮತ್ತು 3ನೇ ಪ್ರತಿವಾದಿಗಗಳಿಂದ ನಗದು ರೂಪದಲ್ಲಿ ರೂ.70,000/- ಮತ್ತು ಸ್ಟೇಟ್ ಬ್ಯಾಂಕ ಆಫ ಮೈಸೂರು, ಎಂಸಿಇ ಶಾಖೆ ಮೈಸೂರಿನ ಚೆಕ್ ನಂ.399052ರ ರೀತ್ಯಾ ರೂ.68,750/-ನ್ನು ಪಡೆದುಕೊಂಡು ಸಮನಾಗಿ ಹಂಚಿಕೊಂಡಿದ್ದೇವೆ ಎಂದು ಬರೆದಿದ್ದಾರೆ ಎಂದರೆ ನನಗೆ ಯಾವುದೇ ಹಣವನ್ನು ಕೊಟ್ಟಿಲ್ಲ. ವಾದಿಯರಾದ ನಾವು, 4 ಮತ್ತು 5ನೇ ಪ್ರತಿವಾದಿಯರಾದ ನಮಗೆ ನಮ್ಮ ತಾಯಿ ಹಾಗೂ 1ನೇ ಪ್ರತಿವಾದಿ 1997ರಲ್ಲಿ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರೂ ಸಹ 2 ಮತ್ತು 3ನೇ ಪ್ರತಿವಾದಿಯರಿಂದ ಅನ್ಯತಾ ಲಾಭ ಪಡೆಯಲು ಈ ದಾವೆಯನ್ನು ತಂದಿದ್ದೇವೆ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಸಹೋದರರು ಜಮೀನುಗಳನ್ನು ವಿಭಾಗ ಮಾಡಿಕೊಳ್ಳಲು ಯಾವುದೇ ಚರ್ಚೆ ನಡೆಸಿಲ್ಲ. ದಾವಾ ಆಸ್ತಿಯ ಸರ್ವೇ ನಂ. 50, 2 ಎಕರೆ 31 ಗುಂಟೆ

ಇದೆ. ದಾವಾ ಸ್ವತ್ತಿನ ಚಕ್ಕುಬಂದಿ ಗೊತ್ತಿಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ನನ್ನ ಅಣ್ಣನ ಸರ್ವೇ ನಂ. 55/ಪಿ ಜಮೀನು, ಉತ್ತರಕ್ಕೆ ದೊಡ್ಡಲಿಂಗಯ್ಯರವರ ಜಮೀನು. ವಾದ ಪತ್ರದಲ್ಲಿ ದಾವಾ ಸ್ವತ್ತಿನ ದಕ್ಷಿಣಕ್ಕೆ ಸರ್ವೇ ನಂ. 55/ಪಿ ಯಲ್ಲಿರುವ ನನ್ನ ಅಣ್ಣನ ಜಮೀನು ಎಂದು ಬರೆಸಿಲ್ಲ. 2 ಮತ್ತು 3 ನೇ ಪ್ರತಿವಾದಿಯರಿಂದ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ 2 ಮತ್ತು 3 ನೇ ಪ್ರತಿವಾದಿಯರ ಜಮೀನು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೂ ಕೂಡ 2 ಮತ್ತು 3 ನೇ ಪ್ರತಿವಾದಿಯರ ಜಮಿನು ಎಂದರೆ ಸರಿಯಲ್ಲ. ನನ್ನ ಸೋದರತ್ತೆಯಾದ ಮಾರಮ್ಮರವರ ಜಮೀನು ಇದೆ. ದಾವಾ ಸ್ವತ್ತಿನ ಉತ್ತರಕ್ಕೆ ಸಣ್ಣಯ್ಯರವರ ಜಮೀನು ಎಂದರೆ ಸರಿ. ದಕ್ಷಿಣಕ್ಕೆ 2 ಮತ್ತು 3 ನೇ ಪ್ರತಿವಾದಿಯರ ಜಮೀನು ಎಂದರೆ ಸರಿಯಲ್ಲ.

2 ಮತ್ತು 3 ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನ್ನ ವಕೀಲರ ಮೂಲಕ ತಿಳಿದುಕೊಂಡಿದ್ದೇನೆ. 2 ಮತ್ತು 3 ನೇ ಪ್ರತಿವಾದಿಯರು ಮೋಸದಿಂದ ಜಮೀನು ಬರೆಸಿಕೊಂಡಿದ್ದಾರೆಂದು ಪೊಲೀಸ ಠಾಣೆಗೆ ದೂರು ಕೊಟ್ಟಿಲ್ಲ. ದೂರು ಕೊಡಲು ತೊಂದರೆ ಇತ್ತೆ ಎಂದರೆ ನನಗೆ ಠಾಣೆಗೆ ಹೋಗಿ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಯರು ಮೋಸ ಮಾಡಿದ್ದಾರೆ ಎಂದು ವಕೀಲರಿಗೆ ಮಾಹಿತಿಯನ್ನು ಕೊಟ್ಟಿದ್ದೇನೆ. ನನ್ನ ವಾದ ಪತ್ರದಲ್ಲಿ ಐಪಿಸಿ ಕಲಂಗಳನ್ನು ನಾನೇ ಹೇಳಿ ಬರೆಸಿದ್ದೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.